ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಇದೇ ವಾರಕ್ಕೆ	ಹಿಂದಿನ 5 ವರ್ಷಗಳ ಅಂದಾಜು	ಚಾಲ್ತಿ
ಅಕ್ಕಿ	ರೂಪಾಯಿ 1ಕ್ಕೆ ...	7¼	6 ರಿಂದ 6¾ರ ವರಿಗೆ } ಸೇರುಗಳು.
ರಾಗಿ	,, ...	17½	14 ರಿಂದ 15ರ ವರಿಗೆ }

ವ್ಯವಸಾಯ ಕೆಲಸಗಳು — ಹೊಲ, ಗದ್ದೆಗಳನ್ನು ಉಳುವದು.

ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ — ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿ ಉಳುತ್ತಿದ್ದಾರೆ.
ನಿಂತಿರುವ ಪೈರುಗಳು — ಒಳ್ಳೇ ಸ್ಥಿತಿಯಲ್ಲಿವೆ.

10. ಕಾಲದ ಆಯುತಿಯು ಚೆನ್ನಾಗಿದೆ. ಸಾಕಾದಷ್ಟು ಆಹಾರ ಜಿನಸಿಯು ಇವೆ. ಆದರೆ, ಅವುಗಳ ಧಾರಣೆಗಳು ಹೆಚ್ಚಾಗಿವೆ.

11. ಹೊಸಕೋಟೆ ಮತ್ತು ಕಾರ್ಕಾರ್‌ಹಳ್ಳಿ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಾಲರಾ ಇದೆಯೆಂದು ರಿಪೋರ್ಟಾಗಿರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.
ಬಿತ್ತನೆಯಾದ ಪೈರು — ಶಿಡ್ಲಘಟ್ಟದ ತಾಲ್ಲೂಕಿನಲ್ಲಿ ಕಬ್ಬು.
ಕುಯ್ಯಲಾದ ಪೈರು — ಕೋಲಾರ, ಬಾಂಗಪೇಟೆ ಮತ್ತು ಶಿಡ್ಲಘಟ್ಟ, ಈ ತಾಲ್ಲೂಕುಗಳಲ್ಲಿ ಕಬ್ಬು. ಮುಳಬಾಗಲು, ಶಿಡ್ಲಘಟ್ಟ, ಬಾಗೇಪಲ್ಲಿ ಮತ್ತು ಗೌರೀಬಿದನೂರು ಈ ತಾಲ್ಲೂಕುಗಳಲ್ಲಿ ವೈಶಾಖಿ ಭತ್ತ. ಮುಳಬಾಗಲು ತಾಲ್ಲೂಕಿನಲ್ಲಿ ಮೆಣಸಿನಕಾಯಿ. ಗೌರೀಬಿದನೂರು ತಾಲ್ಲೂಕಿನಲ್ಲಿ ಅರಿಕಿನ.
ಉತ್ಪತ್ತಿಯ ಅಂದಾಜು :—
ಕಬ್ಬು 4 ರಿಂದ 12 ಆಣೆ ವರೆಗೆ.
ವೈಶಾಖಿ ಭತ್ತ 8 ರಿಂದ 12 ಆಣೆ ವರೆಗೆ.
ಮೆಣಸಿನಕಾಯಿ 12 ಆಣೆ.
ಅರಿಸಿನ 8 ರಿಂದ 12 ಆಣೆ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ರಾಬರ್ಟ್ಸನ್ ಪೇಟೆಯಲ್ಲಿ ಅಲ್ಲಲ್ಲಿ ಆಫ ಕೆಲವು ಪ್ಲೇಗ್ ಕೇಸುಗಳು, ಶ್ರೀನಿವಾಸಪುರದ ಕೆಲವು ಗ್ರಾಮಗಳಲ್ಲಿ, ಶಿಡುಬು. ಮತ್ತು ಮೂಲೂರು ತಾಲ್ಲೂಕಿನ 4 ಗ್ರಾಮಗಳಲ್ಲಿ ಕಾಲರಾವು, ಇವು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು — ಕುಯ್ಯಲು ಭತ್ತ ಮತ್ತು ಕಬ್ಬು ಬಿತ್ತುವದು.
ನಿಂತಿರುವ ಪೈರುಗಳ ಸ್ಥಿತಿಯು — ಚೆನ್ನಾಗಿದೆ.
ಬಿತ್ತನೆಯಾದ ಪೈರುಗಳು — ಮದ್ದಗಿರಿ ಮತ್ತು ಗುಬ್ಬಿಯಲ್ಲಿ ಕಬ್ಬು. ಕೊರ್ಟಗೆರೆ ಮತ್ತು ಪಾವಗಡ ಇವುಗಳಲ್ಲಿ ಜೋಳವು.
ಕುಯ್ಯಲಾದ ಪೈರುಗಳು — ಮದ್ದಗಿರಿ, ಶಿರಾ, ತುಮಕೂರು, ಪಾವಗಡ ಮತ್ತು ಕೊರ್ಟಗೆರೆ ಇವುಗಳಲ್ಲಿ ಭತ್ತ, ಮತ್ತು ಗುಬ್ಬಿ, ಕುಣಿಗಲ್ಲು ಮತ್ತು ತುರುವೇಕೆರೆ ಇವುಗಳಲ್ಲಿ ಕಬ್ಬು.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಾಕು.

673

89

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಶ್ರೀರಂಗಪಟ್ಣ, ಯಡತೊರೆ, ಹೆಗ್ಗಡದೇವನಕೋಟೆ ಮತ್ತು ನಂಜನಗೂಡು ಇವುಗಳ ಕೆಲವು ಭಾಗಗಳಲ್ಲಿ ಭೂಮಿಯನ್ನು ಉಳುತ್ತಿದ್ದಾರೆ.

ನಿಂತಿರುವ ಪೈರುಗಳು—ಮೈಸೂರು, ಚಾಮರಾಜನಗರ, ಶ್ರೀರಂಗಪಟ್ಣ, ಯಡತೊರೆ, ನಂಜನಗೂಡು, ಟಿ. ನರಸೀಪುರ, ಮಳವಳ್ಳಿ, ಮಂಡ್ಯ, ಕೃಷ್ಣರಾಜಪೇಟೆ ಮತ್ತು ನಾಗಮಂಗಲ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಹುರುಳಿ, ಎಳ್ಳು, ತೊಗರಿ, ಹರಳ್ಳು, ಕಬ್ಬು ಇವುಗಳು ಜೆನ್ನಾಗಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಮಳವಳ್ಳಿಯ ಕೆಲವು ಭಾಗಗಳಲ್ಲಿ ಜೋಳವು ಮತ್ತು ಎಳ್ಳು; ಗುಂಡ್ಲುಪೇಟೆಯ ಕೆಲವು ಭಾಗಗಳಲ್ಲಿ ಜೋಳ, ಎಳ್ಳು, ತೊಗರಿ ಮತ್ತು ಹರಳ್ಳು, ಹುಣಸೂರಿನ ಕೆಲವು ಭಾಗಗಳಲ್ಲಿ ರಾಗಿ; ಎಡತೊರೆಯ ಕೆಲವು ಭಾಗಗಳಲ್ಲಿ ಕಬ್ಬು—ಇವುಗಳೆಲ್ಲಾ ಬಿತ್ತಲ್ಪಡುತ್ತಿವೆ.

ಕುಯ್ಯಲಾದ ಪೈರುಗಳು—ಮಳವಳ್ಳಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಬ್ಬನ್ನು ಆಲೆ ಆಡುತ್ತಿದ್ದಾರೆ.

10. ಕಾಲದ ಆಯತಿಯು ಜೆನ್ನಾಗಿದೆ. ಅನೇಕ ತಾಲ್ಲೂಕುಗಳಲ್ಲಿ ಜೋಳ, ಎಳ್ಳು ಮುಂತಾದ ಕುಷ್ಕಿ ಪೈರುಗಳಿಗೆ ಮಳೆಯು ಬೇಕಾಗಿದೆ. ರೈತರಲ್ಲೂ ಮತ್ತು ವರ್ತಕರಲ್ಲಿಯೂ ಈಗ್ಯೆ ಸಾಕಾದಷ್ಟು ಆಹಾರ ಜಿನಸು ಇವೆಯೆಂದು ರಿಪೋರ್ಟಾಗಿದೆ.

11. ಗುಂಡ್ಲುಪೇಟೆ, ನಂಜನಗೂಡು ಮತ್ತು ನಾಗಮಂಗಲ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಾಲರಾ ಇನ್ನೂ ಇರುವದು ಹೊರ್ತು, ಜನಾರೋಗ್ಯವು ಜೆನ್ನಾಗಿದೆ.

12. ಎಲ್ಲಾ ತಾಲ್ಲೂಕುಗಳಲ್ಲಿಯೂ ದನಗಳು ಆರೋಗ್ಯವಾಗಿವೆಯೆಂದು ರಿಪೋರ್ಟಾಗಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಜೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಎಲ್ಲಾ ತಾಲ್ಲೂಕುಗಳಲ್ಲಿಯೂ, ಬಿತ್ತುವದಕ್ಕಾಗಿ ಭೂಮಿಯನ್ನು ತಯಾರ್ಮಾಡುತ್ತಿದ್ದಾರೆ.

ನಿಂತಿರುವ ಪೈರುಗಳು—ಯಾವಪಂದರೆ, ಕಾರ್‌ಭತ್ತವೂ ಮತ್ತು ಕಬ್ಬು ಒಳ್ಳೇ ಸ್ಥಿತಿಯಲ್ಲಿವೆ.

ಬಿತ್ತನೆಯಾದ ಪೈರುಗಳು—ಹಾಸನ, ಅರಕಲಗೂಡು ತಾಲ್ಲೂಕುಗಳಲ್ಲಿಯೂ ಮತ್ತು ಆಲೂರು ಸಬ್ ತಾಲ್ಲೂಕಿನಲ್ಲಿಯೂ ಗಿಡ್ಡರಾಗಿ. ಮಂಜರಾಬಾದ, ಅರಕಲಗೂಡು ಬೇಲೂರು ತಾಲ್ಲೂಕುಗಳಲ್ಲಿಯೂ ಮತ್ತು ಆಲೂರು ಸಬ್ ತಾಲ್ಲೂಕಿನಲ್ಲಿಯೂ ಭತ್ತ. ಅರಕಲಗೂಡು ತಾಲ್ಲೂಕಿನಲ್ಲಿ ತೊಗರಿ ಮತ್ತು ಜೋಳ ಹಾಸನದ ತಾಲ್ಲೂಕಿನಲ್ಲಿ ಮಳೆ ಇಲ್ಲದ್ದರಿಂದ ಬಿತ್ತನೆಯು ಸ್ವಲ್ಪ ತಡೆಯಾಗಿದೆ.

ಕುಯ್ಯಲಾದ ಪೈರು—ಚನ್ನರಾಯಪಟ್ಣದ ತಾಲ್ಲೂಕಿನಲ್ಲಿ ಕಬ್ಬನ್ನು ಕುಯ್ಯುತ್ತಿದ್ದಾರೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಹಾಸನ ಮತ್ತು ಚನ್ನರಾಯಪಟ್ಣ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗೂ ಮತ್ತು ಕಾಲರಾವೂ ಮತ್ತು ಮಂಜರಾಬಾದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಿಡುಬೂ ಇವು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ಆದರೆ, ಮಂಜರಾಬಾದ ತಾಲ್ಲೂಕಿನಲ್ಲಿ ಬಂದು ಗ್ರಾಮದಲ್ಲಿ ದನಗಳಿಗೆ "ಗುಂಡಿಗೆ ರೋಗ" ವೆಂಬ ಬಂದು ವಿಧವಾದ ಗಂಟ್ಲು ರೋಗವು ಇದೆಯೆಂದು ರಿಪೋರ್ಟಾಗಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಹೊನ್ನಾಳಿ, ಸೊರಬ, ಸಾಗರ, ನಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಉಳುತ್ತಾ ಇದ್ದಾರೆ.

ನಿಂತಿರುವ ಪೈರುಗಳು—ಶಿವಮೊಗ್ಗ, ಚೆನ್ನಗಿರಿ, ಶಿಕಾರಿಪುರ, ಸೊರಬ, ಸಾಗರ, ನಗರ ತೀರ್ಥಹಳ್ಳಿ ಈ ತಾಲ್ಲೂಕುಗಳಲ್ಲಿಯೂ ಮತ್ತು ಕುಂಸಿ ಸಬ್ ತಾಲ್ಲೂಕಿನಲ್ಲಿಯೂ ಕಬ್ಬೂ, ಮತ್ತು ನಗರದ ತಾಲ್ಲೂಕಿನಲ್ಲಿ ಕಾರ್‌ಭತ್ತವೂ ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು—ಚೆನ್ನಗಿರಿ ತಾಲ್ಲೂಕಿನಲ್ಲಿ ಕಬ್ಬನ್ನು ಆಲೆ ಆಡುವದೂ, ಮತ್ತು ಸಾಗರದ ತಾಲ್ಲೂಕಿನಲ್ಲಿ ವೆಣಸಿನಕಾಯಿಯನ್ನು ಕುಯ್ಯುವದೂ ನಡಿಯುತ್ತಿದೆ.

10. ಕಾಲದ ಆಯತಿಯು ಚೆನ್ನಾಗಿದೆ. ಸಾಕಾದಷ್ಟು ಆಹಾರ ಜಿನಸು ಸಿಕ್ಕುತ್ತವೆ.

11. ಚೆನ್ನಗಿರಿ, ಹೊನ್ನಾಳಿ ಮತ್ತು ತೀರ್ಥಹಳ್ಳಿ ಈ ತಾಲ್ಲೂಕುಗಳಲ್ಲಿ ಸಿಡುಬು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ದನಗಳಿಗೆ ಬಂದಿದ್ದ ರೋಗವು ನಿಂತಿದೆ. ಸಾಗರ, ನಗರ ಮತ್ತು ಶಿಕಾರಿಪುರ ಈ ತಾಲ್ಲೂಕುಗಳಲ್ಲಿ ಪ್ರಾಣಭಯವಿಲ್ಲದ ಗೋಮಾರೀ ರೋಗವು ಇದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಜೆನ್ನಾಗಿದೆ.

9. ವ್ಯವಸಾಯ ಕೆಲಸ — ಸಾಧಾರಣವಾಗಿ ಡಿಸ್ಟ್ರಿಕ್ಟಿನಲ್ಲೆಲ್ಲಾ ಉಳುತ್ತಿದ್ದಾರೆ.

ನಿಂತಿರುವ ಪೈರುಗಳು — ಚಿಕ್ಕವಗಳೂರು ಮತ್ತು ಕಡೂರು ಇವುಗಳಲ್ಲಿ ಕಬ್ಬು ಮತ್ತು ಕೋಡೆ ಭತ್ತವೂ, ಮತ್ತು ಮೂಡಗೆರೆ, ಕೊಪ್ಪ ಇವುಗಳಲ್ಲಿ ಕೋಡೆ ಭತ್ತವೂ ಒಳ್ಳೇ ಸ್ಥಿತಿಯಲ್ಲಿವೆ.

ಬಿತ್ತನೆಯಾದ ಪೈರುಗಳು — ಕೊಪ್ಪ, ಚಿಕ್ಕವಗಳೂರು, ಮೂಡಿಗೆರೆ, ಎಡೇಹಳ್ಳಿ ಇವುಗಳಲ್ಲಿ ಭತ್ತವನ್ನೂ ಮತ್ತು ಚಿಕ್ಕವಗಳೂರಿನಲ್ಲಿ ಗಿಡ್ಡರಾಗಿಯನ್ನೂ ಬಿತ್ತುತ್ತಾ ಇದ್ದಾರೆ. ತರೀಕೆರೆ, ಕೊಪ್ಪ ಇವುಗಳಲ್ಲಿ ಕಬ್ಬನ್ನು ನಾಟುತ್ತಿದ್ದಾರೆ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ :—

ತರೀಕೆರೆಯಲ್ಲಿ ಕಬ್ಬು — ಉತ್ಪತ್ತಿ 12 ಆಣೆ.

ಕೊಪ್ಪದಲ್ಲಿ ಸ್ವಲ್ಪವಾಗಿ ಮೆಣಸು ಮತ್ತು ಕಬ್ಬು — ಉತ್ಪತ್ತಿ 8 ರಿಂದ 10 ಆಣೆ ವರಿಗೆ.

10. ಕಾಲದ ಆಯುತಿಯು ಜೆನ್ನಾಗಿದೆ. ಸಾಕಾದಷ್ಟು ಆಹಾರ ಜೆನಸು ಸಿಕ್ಕುತ್ತವೆ.

11. ಕೊಪ್ಪ, ಚಿಕ್ಕವಗಳೂರು, ಮೂಡಿಗೆರೆ, ಎಡೇಹಳ್ಳಿ, ಶೃಂಗೇರಿ ಇವುಗಳಿಗೆ ಸೇರಿದ ಕೆಲವು ಸ್ಥಳಗಳಲ್ಲಿ ಸಡಿಲು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಜೆನ್ನಾಗಿದೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ತರೀಕೆರೆಗೆ ಸೇರಿದ ಯಿರದ ಹಂಕಲು ಗ್ರಾಮದಲ್ಲಿ "ದೊಡ್ಡ ರೋಗವು" ಇನೇನಿಂದೂ, ಇದನ್ನು ಕ್ಯಾಟಲ್ ಡಿಸೀಜ್ ಇನ್ಸ್ಪೆಕ್ಟರವರಿಗೆ ತಿಳಿಸಿ ಇದೆಯೆಂದೂ ರಿಪೋರ್ಟಾಗಿದೆ. ಕಡೂರು, ಶೃಂಗೇರಿ ಇವುಗಳಲ್ಲಿ ದನಗಳಿಗೆ ಬಂದಿದ್ದ ರೋಗವು ಕ್ರಮೇಣ ಕಡಮೆಯಾಗಿ ಬರುತ್ತಿದೆಯೆಂದು ರಿಪೋರ್ಟಾಗಿದೆ. ಎಡೇಹಳ್ಳಿ, ಕಬ್ ತಾಲ್ಲೂಕಿನ ಕ್ಕಸಬಾ ಹೋಬಳಿಗೆ ಸೇರಿದ ಕೆಲವು ಗ್ರಾಮಗಳಲ್ಲಿ "ದೊಡ್ಡ ರೋಗವು" ತಲೆದೋರಿದೆಯೆಂದೂ, ರೋಗ ಹಿಡಿದ ದನಗಳನ್ನು ಪ್ರತ್ಯೇಕವಾಗಿ ಇಟ್ಟುಯಿದ್ದಯೆಂದೂ ರಿಪೋರ್ಟಾಗಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಜೆನ್ನಾಗಿದೆ.

9. ವ್ಯವಸಾಯ ಕೆಲಸ — ಡಿಸ್ಟ್ರಿಕ್ಟಿನಲ್ಲಿ ಉಳುತ್ತಾ ಇದ್ದಾರೆ.

ನಿಂತಿರುವ ಪೈರುಗಳು ಯಾವವೆಂದರೆ — ಭತ್ತ, ಕಬ್ಬು ಮತ್ತು ಅರಳೆ ಇವುಗಳು ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ :—

ಚಿತ್ರದುರ್ಗ ಮತ್ತು ಹೊಳಕಾಲ್ಮೂರು ತಾಲ್ಲೂಕುಗಳಲ್ಲಿ ಅರಳೆ — ಉತ್ಪತ್ತಿ 8 ರಿಂದ 14 ಆಣೆ ವರಿಗೆ.

ಜೆಳ್ಳಕೆರೆ ಮತ್ತು ಹಿರಿಯೂರು ತಾಲ್ಲೂಕುಗಳಲ್ಲಿ ಭತ್ತ — ಉತ್ಪತ್ತಿ 8 ರಿಂದ 12 ಆಣೆ ವರಿಗೆ.

ಹೊಳಕಾಲ್ಮೂರು ತಾಲ್ಲೂಕಿನಲ್ಲಿ ಕಬ್ಬು — ಉತ್ಪತ್ತಿ 12 ಆಣೆ.

10. ಕಾಲದ ಆಯುತಿಯು ಜೆನ್ನಾಗಿದೆ. ಆಹಾರ ಜೆನಸು ಸಿಕ್ಕುತ್ತವೆ.

11. ಜನಾರೋಗ್ಯವು ಜೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1907ನೆಯ ವರ್ಷದ ನೇ 14ನೆಯ ತಾರೀಖು.

ಎ. ರಂಗಸ್ವಾಮಿ ಐಯ್ಯಂಗಾರ್,
ರೆವಿನ್ಯೂ ಕಮಿಷನರ್.